ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ರ ಮೇಲಿನ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಲಾಯಿತು. ಮುಖ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.

ದಿನಾಂಕಃ 29-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಪ್ರತಿವಾದಿ ಪರ ಶ್ರೀ ಎಸಎಸಹೆಚ ವಕೀಲರಿಂದ

2003 ರಲ್ಲಿ ಬೆಂಗಳೂರಿನ ಜಯನಗರದಲ್ಲಿ ಇರುವ ಕಾರ್ಪೋರೇಷನ್ ಬ್ಯಾಂಕನಲ್ಲಿ ತೆಗೆದಿರುವ 2003 ರಿಂದ 2007 ರವರೆಗಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎರಡು ಪಾಸಬುಕ್ಕಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ 32 ಮತ್ತು ನಿಡಿ 33 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ- ವಾದಿ ಪರ ಶ್ರೀ ಬಿಎನಕೆ ವಕೀಲರಿಂದ

ಈ ಎರಡು ಪಾಸಬುಕ್ಕನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿರುವಿರಿ ಎಂಬ ಪ್ರಶ್ನೆಗೆ ಸಾಕ್ಷಿ ಹಾಗೆ ನಿಂತಿರುವರು. ಸಾಕ್ಷಿ ನಂತರ ನುಡಿಯುವುದೆನೆಂದರೆ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ಅದನ್ನು ತೋರಿಸುವ ಸಲುವಾಗಿ ಅದನ್ನು ಹಾಜರುಪಡಿಸಿರುವುದಾಗಿ ಎಂದು ಉತ್ತರಿಸುವರು. 2007 ನೇ ಸಾಲಿನಲ್ಲಿ ಜಮೀನನ್ನು ಖರೀದಿ ಮಾಡಿರುವೆನು. 2005 ರಲ್ಲಿ ಖರೀದಿ ನೊಂದಣಿ ಮಾಡಿಕೊಳ್ಳುವ ಪೂರ್ವದಲ್ಲಿ ಸಂಚಕಾರ ಅಂತಾ ಹಣ ನೀಡಿದ್ದೆನು. 2 ಲಕ್ಷ ರೂ. ಹಣವನ್ನು ಮಾಂಡ್ರೆ ಎಂಬುವರಿಗೆ ನೀಡಿದ್ದೆನು. ಮಾಂಡ್ರೆಯವರ ಸಂಪೂರ್ಣ ಹೆಸರು ನನಗೆ ಹೇಳಲು ಆಗುವುದಿಲ್ಲ. ನಾನು ಮಾಂಡ್ರೆ ಎಂಬುವರಿಗೆ ಯಾವುದೇ ಹಣ ನೀಡದೆ ಇದ್ದರೂ ಸಹ ನಾನು ಹಣ ನೀಡಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಾನು ಖರೀದಿ ಹಿಡಿದಿರುವ ಜಮೀನಿನ ರಿ ಸ ನಂ. 310 ವಿಸ್ತೀರ್ಣ 4 ಎಕರೆ. ಈ ಜಮೀನನ್ನು ವಾದಿಯು ಈ

ದಾವೆಯಲ್ಲಿ ದಾವಾ ಜಮೀನನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಅಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. 2005 ರಲ್ಲಿ ನನಗೆ 9 ರಿಂದ 10 ಸಾವಿರ ಹಣ ಸಂಬಳ ಬರುತ್ತಿತ್ತು. ನಾನು ಹಾಜರುಪಡಿಸಿರುವ ಪಾಸಪುಸ್ತಕಗಳಲ್ಲಿ ಕೇವಲ ಒಂದು ಬಾರಿ 9-10 ಸಾವಿರ ರೂ ಹಣ ಜಮಾ ಆಗಿದ್ದು ರೂ. 5 ಸಾವಿರ ಸಂಬಳ ಅಂತಾ ಜಮಾ ಆಗುತ್ತಾ ಬಂದಿರುವುದು ಅಂದರೆ ಸರಿಯಲ್ಲ. ನಿಡಿ 32 ರ ದಾಖಲೆಯಲ್ಲಿ ದಿಃ 19.06.2007 ರಂದು ರೂ. 49,500-00 ಹಣ ನನ್ನ ಖಾತೆಯಿಂದ ವರ್ಗಾವಣೆ ಆಗಿದ್ದು ಅದು ಯಾರ ಖಾತೆಗೆ ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ವಾದಿಗೆ ಹಿಸ್ಸೆ ನೀಡಬಾರದೆಂದು ದುರುದ್ದೇಶದಿಂನದ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿದ್ದೆನೆ ಅಂದರೆ ಸರಿಯಲ್ಲ.

**ಪಾಟಿ ಸವಾಲುಃ-** 1 ರಿಂದ 3 ರ ಪರವಾಗಿ ಶ್ರೀ ಎಸಎಕೆ ವಕೀಲರಿಂದ

ನನ್ನ ದುಡಿಮೆಯಿಂದ ಬಂದ ಆದಾಯದಲ್ಲಿ ಖರ್ಚು ಮಾಡಿ ಉಳಿದ ಹಣವನ್ನು ನನ್ನ ಖಾತೆಗೆ ಜಮಾ ಮಾಡಿಕೊಳ್ಳುತ್ತಿದ್ದೆನು. ನಾನು ಜಮೀನನ್ನು ರೂ. 2,53,000-00 ಗಳಿಗೆ ಖರೀದಿ ಮಾಡಿರುವೆನು. ನಮ್ಮ ಗ್ರಾಮದ ಊರ ಹಿರಿಯರಾದ ಲಕ್ಷ್ಮಣ, ಮಡಿವಾಳಪ್ಪ ತೋಟದ ಇತರರು ಭಾಗವಹಿಸಿದ್ದರು. 2005 ನೇ ಸಾಲಿನಲ್ಲಿ ಸಂಚಕಾರ ಪಾವತಿ ಆಗಿರುವುದು. ಆ ದಾಖಲಾತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಅಂದರೆ ಸರಿ. ಸಂಚಕಾರ ಅಂತಾ 1,50,000-00 ರೂ. ಹಣ ನೀಡಿರುವೆನು. ನಂತರ 50 ಸಾವಿರ, 25 ಸಾವಿರ ಹಣ ನೀಡಿದ್ದು ಖರೀದಿ ಪತ್ರ ನೊಂದಣಿ ಮಾಡುವ ದಿನದಂದು ರೂ. 15 ಸಾವಿರ ಹಣ ನೀಡಿರುವೆನು. ಈ ಖರೀದಿ ಪತ್ರದಲ್ಲಿ

ನಾನು ಹಣ ನೀಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಅಂದರೆ ಸರಿ. ಆದರೆ ಒಟ್ಟು ಹಣ ನೀಡಿರುವ ಬಗ್ಗೆ ನಮೂದು ಮಾಡಿರುವೆನು. ಈ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನಾನು ವೈಯಕ್ತಿಕ ಬ್ಯಾಕನಿಂದ ಸಾಲ ಮಾಡಿ ತೆಗೆಸಿ ಕೊಟ್ಟಿರುವೆನು. ನಾನು ಬ್ಯಾಂಕನಿಂದ ಸಾಲ ಮಾಡಿದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ದಿಃ 02.06.2005 ರಂದು ನಾನು ಬ್ಯಾಂಕನಿಂದ ರೂ. 1,50,000.00 ಹಣ ವೈಯಕ್ತಿಕವಾಗಿ ಸಾಲ ಪಡೆದುಕೊಂಡ ಬಗ್ಗೆ ಪಾಸಬುಕ್ಕನಲ್ಲಿ ನಮೂದು ಇರುವುದು. ಆ ಹಣ ನೀಡಿದ ಬಗ್ಗೆ ನಾನು ಸಂಚಕಾರ ಪತ್ರ ಹಾಜರುಪಡಿಸಿರುವುದಿಲ್ಲ ಅಂದರೆ ಸರಿ. ಖರೀದಿ ಪತ್ರದಲ್ಲಿ ನಾನು ಮುಂಗಡವಾಗಿ ಹಾಗು ಕಂತು ಕಂತುಗಳಲ್ಲಿ ಹಣ ನೀಡಿದ ಬಗ್ಗೆ ನಮೂದು ಮಾಡಿರುವುದಿಲ್ಲ ಅಂದರೆ ಸರಿ. ನಾನು ಹಾಜರುಪಡಿಸಿರುವ ಪಾಸಬುಕ್ಕನ ಅಕೌಂಟನಿಂದ ಹಣ ತೆಗೆಸಿ ನೀಡಿರುವೆನು. ನಿಡಿ 32 ಮತ್ತು 33 ರ ದಾಖಲೆಯಲ್ಲಿ ನನ್ನ ಖಾತೆಯಲ್ಲಿ ಎಷ್ಟು ಹಣ ಇತ್ತು ಅಷ್ಟೇ ಹಣ ಇತ್ತು ಅಂದರೆ ಸರಿ. ನಾನು ಬ್ಯಾಂಕನಿಂದ ಸಾಲ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಸಾಲ ಪಡೆದುಕೊಂಡಿರುವ ದುಡ್ಡು ನನ್ನ ಸಾಲದ ಅಕೌಂಟಗೆ ಜಮಾ ಆಗಿರುವುದು ಅಂದರೆ ಸರಿ. ನಿಡಿ 32 ಮತ್ತು ನಿಡಿ 33 ರ ದಾಖಲೆಯಲ್ಲಿ ದಿಃ 12.07.2005 ರಂದು ರೂ. 1,18,000-00 ಹಣವನ್ನು ತೆಗೆದುಕೊಂಡಿರುವೆನು. ನಿಡಿ 33 ರಲ್ಲಿ 1,50,000.00 ಹಣ ಜಮಾ ಆದ ಬಗ್ಗೆ ನಮೂದು ಆಗಿರುವುದಿಲ್ಲ ಅಂದರೆ ಸರ. ಆ ಹಣವನ್ನು ನಾನು ಹೊಂದಾಣಿಕೆ ಮಾಡಿ ನೀಡಿರುವೆನು.ನಿಡಿ 32 ರ ದಾಖಲೆ ಪ್ರಕಾರ ತೆಗೆದುಕೊಂಡ ನಂತರ ಹಣ ಜಮೀನಿನ ಮಾಲೀಕರಿಗೆ ನೀಡಿರುವ ಬಗ್ಗೆ ಯಾವುದೇ

ದಾಖಲಾತಿ ಹಾಜುರುಪಡಿಸಿರುವುದಿಲ್ಲ ಆದರೆ ಊರ ಹಿರಿಯರ ಸಮಕ್ಷಮ ನೀಡಿರುವೆನು. ದಾವಾ ಆಸ್ತಿಯಲ್ಲಿನ ಜಮೀನು ಕುಟುಂಬದ ಹೆಸರಿನಲ್ಲಿ ಇತ್ತು ಅಂದರೆ ಸರಿಯಲ್ಲ. ಅದು ನನ್ನ ಹಿಸ್ಸಾದ ಜಮಿನು ಆಗಿರುವುದು. ಅದರಿಂದ ಆದಾಯ ಬರುತ್ತಿತ್ತು ಅಂದರೆ ಸರಿ. ಅದರ ಆದಾಯ ಪಡೆದುಕೊಳ್ಳುತಿದ್ದೆನು ಅಂದರೆ ಸರಿ. ಕುಟುಂಬದ ಆಸ್ತಿಯಲ್ಲಿ ಹಿತದೃಷ್ಟಿಯಿಂದ ಹಿಸ್ಸೆ ದಿಸ್ಸೆ ಆದ ಬಗ್ಗೆ ಯಾವುದೇ ನೊಂದಾಯಿತ ದಾಖಲಾತಿ ಇರುವುದಿಲ್ಲ ಅಂದರೆ ಸರಿ. ನನ್ನ ತಂದೆಗೆ 2005 ರಲ್ಲಿ ವಯಸ್ಸು ಆಗಿತ್ತು ಅಂದರೆ ಸರಿ. ದಾವಾ ಜಮೀನುಗಳಿಂದ ಬಂದ ಆದಾಯವನ್ನು ನೀನೇ ಪಡೆದುಕೊಳ್ಳುತ್ತಿದ್ದೆನೆ ಅಂದರೆ ಸರಿಯಲ್ಲ ಆ ಸಮಯದಲ್ಲಿ ನನ್ನ ತಂದೆಗೂ ಸಹ ಬೇರೆ ಜಮೀನಿನ ಹಿಸ್ಸೆ ಬಂದಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ನನ್ನ ಜಮೀನಿನಿಂದ ಬಂದ ಆದಾಯ ಮತ್ತು ನನ್ನ ಸಂಬಳ ಎರಡನ್ನೂ ಕೂಡಿಸಿ ಇಡುತ್ತಿದ್ದೆನು ಅಂದರೆ ಸಾಕ್ಷಿ ನುಡಿಯುವುದೆನೆಂದರೆ ತಾನು ಅದರ ಬಗ್ಗೆ ಲೆಕ್ಕ ಇಟ್ಟಿರುವುದಿಲ್ಲ ಎಂದು ಉತ್ತರಿಸುವರು. ಆದರೆ ಎರಡೂ ಆದಾಯ ಕೂಡಿಸಿ ಇಡುತ್ತಿದ್ದೆನು ಅಂದರೆ ಸರಿ. ಪ್ರತಿವಾದಿ 2 ಇವರು 1 ನೇ ಪ್ರತಿವಾದಿ 1 ನೇ ಹೆಂಡತಿ ಅಥವಾ 2 ನೇ ಹೆಂಡತಿ ಅಂದರೆ ಸಾಕ್ಷಿ ಯಾವುದೇ ಉತ್ತರ ನೀಡುವುದಿಲ್ಲ. 2 ನೇ ಪ್ರತಿವಾದಿ ನನಗೆ ಗೊತ್ತಿರುವರು. ಇವಳು ಆಗ ನಮ್ಮ ಮನೆಯಲ್ಲಿ ಕಸ ಮುಸರಿ ಮಾಡುವ ಕೆಲಸಕ್ಕೆ ಇದ್ದಳು. ಆಗ ಅವಳು ಮನೆಯಲ್ಲಿ ಕೆಲಸಕ್ಕೆ ಇದ್ದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. 1 ನೇ ಪ್ರತಿವಾದಿ ಈಗ 2 ನೇ ಪ್ರತಿವಾದಿಯ ಜೊತೆ ವಾಸವಾಗಿರುವರು. 2 ನೇ ವಾದಿಯ ವಿವಾಹವಾಗಿರುವದು. 2 ನೇ ವಾದಿಗೆ ಜನ್ಮ ತಾಳಿರುವರು. ವಾದಿ 2 ಗಂಡನ

ಮನೆಯಲ್ಲಿಯೂ ಸಹ ವಾಸವಾಗಿರುವಳು. ಪ್ರತಿವಾದಿ 1 ವಿಗೆ 3 ನೇ ಪ್ರತಿವಾದಿಯು ಸಹ ಮಗಳಾಗಿರುವಳು ಅಂದರೆ ಸರಿಯಲ್ಲ. ಪ್ರತಿವಾದಿ 2 ಹೊಸರಿತ್ತಿಯ ಚನ್ನವೀರಯ್ಯನ ಜೊತೆ ವಿವಾಹ ಮಾಡಿಕೊಟ್ಟಿದ್ದು ಇವರ ವೈವಾಹಿಕ ಜೀವನದಿಂದ ಪ್ರತಿವಾದಿ 3 ಜನ್ಮ ತಾಳಿರುವರು. ಈ ಸಂಗತಿಯನ್ನು ನಾನು ಕೇಳಿ ತಿಳಿದುಕೊಂಡಿರುವೆನು. ನಾನು 10-15 ವರುಷದವನಿದ್ದಾಗ ಈ ಸಂಗತಿ ನನಗೆ ಗೊತ್ತಾಗಿರುವುದು.

ನಾನು 1970 ರಲ್ಲಿ ಜನ್ಮ ತಾಳಿರುವೆನು. ಪ್ರತಿವಾದಿ 3 ರವರು 1986 ರಲ್ಲಿ ಜನ್ಮ ತಾಳಿರುವರು. ಅವಳ ಜನನ ದಾಖಲೆ ನೋಡಿ ನನಗೆ ಗೊತ್ತಾಗಿರುವುದು. ವಾದಿ 2 ಇವರು 1978-79 ರಲ್ಲಿ ಜನ್ಮ ತಾಳಿರುವರು. ಪ್ರತಿವಾದಿ 2 ಹೊಸರಿತ್ತಿಯಲ್ಲಿನ ಚನ್ನವೀರಯ್ಯನ ಜೊತೆ ವಿವಾಹವಾದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ 3 ಯಾರಿಗೆ ಜನ್ಮ ತಾಳಿರುವಳು ಎಂಬುದರ ಬಗ್ಗೆ ಅವರ ತಂದೆ ತಾಯಿಗಳಿಗೆ ಮಾತ್ರ ಗೊತ್ತಿರುತ್ತದೆ ಅಂದರೆ ಸರಿ.

ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ
(ಸ್ಥಳ ಸವಣೂರ)

ಅಸಲು ದಾವಾ  ನಂ.16/2017

ಡಿ ಡಬ್ಲು 2